# ನಕ್ಕುಬಿಡಿ

ತಿಮ್ಮ: ಎಲ್ಲೋ ಗುಂಡಾ ನಿನ್ನ ಕಾರು ಕಾಣಿಸ್ತಾ ಇಲ್ಲ?
ಗುಂಡ: ಬ್ಯಾಂಕ್‌ನಲ್ಲಿ ಕಾರ್‌ಗೆ ಅಂತ ಸಾಲ ತಗೊಂಡಿದ್ದೆ. ಅದನ್ನು ಸರಿಯಾಗಿ ಹಿಂದಿರುಗಿಸಿರಲಿಲ್ಲ. ಮೊನ್ನೆ ಬ್ಯಾಂಕಿನವರು ಬಂದು ನನ್ ಕಾರ್ ಎತ್ತಾಕ್ಕೊಂಡ್ ಹೋದ್ರು!
ತಿಮ್ಮ: ಹೋಗ್ಲಿ ಬಿಡು... ಈ ಬ್ಯಾಂಕ್‌ನವರ ಸಹವಾಸಾನೇ ಇಷ್ಟು. ಇದಕ್ಕೆಲ್ಲಾ ಬೇಜಾರು ಮಾಡ್ಕೋಬೇಡ!
ಗುಂಡ: ಅಯ್ಯೋ ಅದಕ್ಕೆಲ್ಲ ಬೇಜಾರ್ ಮಾಡ್ಕೊಂಡಿಲ್ಲ. ರೂಲ್ಸ್ ಇರೋದೆ ಹೀಗೆ ಅಂತ ಮೊದಲೇ ಗೊತ್ತಿದ್ರೆ ಸಾಲ ತಗೊಂಡು ಆಮೇಲೆ ಮದುವೆ ಮಾಡ್ಕೊತಿದ್ದೆ!

***




ಸುಬ್ಬಿ: ರೀ.. ರೀ.. ಇಲ್ ನೋಡ್ರಿ. ಬೆಳಿಗಿನ್ ಜಾವ ನಮ್ಮ ಮನೆಗೆ ಕಳ್ಳ ನುಗ್ಗಿ ಒಡವೆ ಕಳ್ಳತನ ಮಾಡಿದ್ದಲ್ಲದೇ ನಾನು ಮಾಡಿಟ್ಟಿದ್ದ ಕೇಸರಿಭಾತ್ ಅನ್ನೂ ತಿಂದು ಹೋಗಿದ್ದಾನೆ! ಬೇಗ ಪೊಲೀಸರಿಗೆ ಫೋನ್ ಮಾಡ್ರಿ!
ಗುಂಡ: ಅಯ್ಯೋ ಪಾಪ. ನೀನ್ ಮಾಡಿದ ಕೇಸರಿಭಾತ್ ತಿಂದು ಹೋಗಿದ್ದಾನಾ? ತಡಿ ಮೊದಲು ಹತ್ತಿರದ ನಮ್ ಡಾಕ್ಟರ್‌ಗೆ ಫೋನ್ ಮಾಡ್ತೀನಿ!

***

ಗುಂಡ: ಪಕ್ಕದ್ ಮನೆ ಸುಬ್ಬನ ಹತ್ರ ಹೋಗಿ ಸ್ವಲ್ಪ ಕಟಿಂಗ್ ಪ್ಲೇಯರ್ ಇಸ್ಕೊಂಡ್ ಬಾ!
ಮರಿ ಗುಂಡ: ಇಲ್ಲಾ ಅಪ್ಪ ಅವ್ರು ಸುಮ್ ಸುಮ್ನೇ ಹಾಗೆಲ್ಲಾ ಕೊಡೋದಿಲ್ಲ!
ಗುಂಡ: ಎಂಥಾ ಕಂಜೂಸ್ ನನ್ ಮಕ್ಳು! ಹೋಗ್ಲಿ ಬಿಡು ನಮ್ ಬೀರುವಿನಲ್ಲಿ ಇರೋದೇ ತಗೊಂಡು ಬಾ!

***

ಸುಬ್ಬ: ಎಲ್ಲಿಗಾದರೂ ಹೋಗುವಾಗ ಬೆಕ್ಕು ಅಡ್ಡ ಬಂದ್ರೆ ಅಪ ಶಕುನ ಅಂತಾರೆ. ನೀನೂ ಇದನ್ನು ನಂಬುತ್ತೀಯಾ ಗುಂಡ?
ಗುಂಡ: ಅದುನೀನು ಮನುಷ್ಯನೋ ಅಥವಾ ಇಲಿನೋ ಅನ್ನೋದನ್ನ ಅವಲಂಬಿಸಿರುತ್ತದೆ!

***

ಗುಂಡನಿಗೆ ಆರೋಗ್ಯ ಗಂಭೀರವಾಗಿ ಹದಗೆಟ್ಟು ಅಪರೇಷನ್ ಥಿಯೇಟರ್‌ಗೆ ಶಿಫ್ಟ್ ಮಾಡಿದ್ರು!
ಡಾಕ್ಟರ್: ಓ ದೇವರೇ ..ಇದು ನನ್ನ ಮೊದಲ ಆಪರೇಷನ್ ನಿನಗೇ ಅರ್ಪಿಸುತ್ತಿದ್ದೇನೆ!

***

ಜಡ್ಜ್: ಅಷ್ಟೊಂದು ಜನ ಇರುವ ಮನೆಯಲ್ಲಿ ಹಗಲು ಹೊತ್ತಿನಲ್ಲಿ ಕಳ್ಳತನ ಮಾಡಿರುವ ನಿನ್ನ ಧೈರ್ಯಕ್ಕೆ ಮೆಚ್ಚಲೇ ಬೇಕು ಕಣಯ್ಯಾ. ಹೇಗೆ ಮತ್ತು ಯಾವ ರೀತಿ ಮಾಡಿದೆ ಹೇಳು?
ಗುಂಡ: ಅದೆಲ್ಲಾ ಬಿಸಿನೆಸ್ ಸೀಕ್ರೆಟ್ಸ್ ಸ್ವಾಮಿ. ಹಾಗೆಲ್ಲಾ ಇಲ್ಲಿ ಓಪನ್ ಆಗಿ ಹೇಳೋಕೆ ಆಗೋಲ್ಲ!

***

ಮರಿ ತಿಮ್ಮ: ಅಲ್ಲಾ ಕಣೋ ನಿಮ್ ಮನೇಲಿ ನೀವು ನಾಕು ಜನ ಅಣ್ಣ ತಮ್ಮ ಎಲ್ರೂ ಒಂದೇ ಥರಾ ಇದ್ದೀರಲ್ಲ. ಅದು ಹೇಗೆ ?
ಮರಿ ಗುಂಡ: ಅಯ್ಯೋ ಪೆದ್ದ! ಅಷ್ಟೂ ಗೊತ್ತಾಗಿಲ್ವಾ? ನಮ್ ಅಪ್ಪ ಜೆರಾಕ್ಸ್ ಅಂಗಡಿ ಇಟ್ಕೊಂಡ್ ಇದಾರೆ!

***

ಡಾಕ್ಟರ್: ನೋಡಪ್ಪಾ ಗುಂಡಾ ನಿನಗೆ ಮಂಡೆ ಆಪರೇಷನ್ ಮಾಡಿಯೇ ಬಿಡ್ತೀನಿ !
ಗುಂಡ: ಇದೆಂಥ ಪಿರಿ ಪಿರಿ ಡಾಕ್ಟ್ರೇ.. ನಿಮಗೆ ಗೊತ್ತು ಉಂಟೋ ನಾ ನಿಮ್ಮಲ್ಲಿ ಬಂದದ್ದು ಎದೆ ನೋವು ಅಂತಾ! ಆದ್ರೆ ನೀವು ನನ್ನ ಮಂಡೇನೇ ಆಪರೇಷನ್ ಮಾಡ್ತೀನಿ ಅಂತೀರಿ!

***

ಜೈಲಲ್ಲಿ ಸೌದೆ ಸೀಳುವ ಕೆಲಸ ಗುಂಡನಿಗೆ!
ಜೈಲ್ ವಾರ್ಡನ್: ಲೇ.. ನಿನಗೆ ಒಂದು ಸಣ್ಣ ಕೆಲ್ಸಾನೂ ನೆಟ್ಟಗೆ ಮಾಡೋಕೆ ಬರೋಲ್ಲ ಅಲ್ವೊ. ಬೆಳಿಗ್ಗೆಯಿಂದ ನಾಕು ತುಂಡು ಸೌದೇನೂ ಸೀಳಿಲ್ಲ ಸೋಮಾರಿ ಕಣೋ ನೀನು.
ಗುಂಡ : ಅಯ್ಯೋ ಹೋಗ್ಲಿ ಬಿಡಿ ಸಾರ್ ಯಾಕ್ ಅಷ್ಟೊಂದ್ ಕೋಪ ಮಾಡ್ಕೋತೀರಿ, ನಿಮಗೆ ನಾನು ಮಾಡುವ ಕೆಲಸ ಇಷ್ಟ ಆಗಲಿಲ್ಲ ಅಂದ್ರೆ ಸುಮ್ನೇ ಯಾಕೆ ಜೈಲಲ್ಲಿ ಇಟ್ಟುಕೊಳ್ಳುತ್ತೀರಿ ನನ್ನ ಮನೆಗೆ ಕಳಿಸಿ ಬಿಡಿ!

—ಆರ್. ವೀರೇಶ್ ಕುಮಾರ್, ಬೆಂಗಳೂರು

